ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಎಂಗಡಿಸಿಟ್ಟ ಸ್ಥಳಗಳ ಆಕ್ರಮಣ

304 (2641) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರ್ವಜನಿಕರ ಉಪಯೋಗಕ್ಕೆ ಎಂಗಡಿಸಿಟ್ಟ ಸ್ಥಳವನ್ನು ಭೂಮಾಪನಾ ಪುಸ್ತಕದಲ್ಲಿ ಎಂಗಡಿಸಲಾಗುತ್ತಿದೆಯೇ; ಅಂಥ ಸ್ಥಳಗಳು ಆಕ್ರಮಣಗಳಾದಾಗ ಸರ್ಕಾರದವರು ಕ್ರಮ ಜರುಗಿಸದೇ ಇರಲು ಕಾರಣಗಳೇನು;

ಆ) ಇಂಥ ಪ್ರಕರಣಗಳನ್ನು ಪತ್ತೆ ಹಚ್ಚಿ ಕೂಡಲೇ ಆಕ್ರಮಣಕಾರರಿಂದ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕ್ರಮ ಜರುಗಿಸುವರೆ;

ಇ) ಬೆಳ್ತಂಗಡಿ ತಾಲ್ಲೂಕು ಉರುವಾಲು ಗ್ರಾಮದ ಸರ್ವೆ ನಂ. 19-1ರಲ್ಲಿ ಪಶುಚಿಕಿತ್ಸಾ ಕೇಂದ್ರಕ್ಕೆ ಮೀಸಲಿಟ್ಟ ಸ್ಥಳವನ್ನು ಆಕ್ರಮಣ ಮಾಡಿದುದರ ಬಗ್ಗೆ ಸಾರ್ವಜನಿಕರು ಆಕ್ಷೇಪ ಮಾಡಿದ್ದರೂ ಸರ್ಕಾರದವರು ಕ್ರಮ ಜರುಗಿಸಿಲ್ಲ ಎಂಬುದನ್ನು ಗಮನಿಸಲಾಗಿದೆಯೇ;

ಈ) ಉರುವಾಲು ಗ್ರಾಮದಲ್ಲಿ ಸ್ಮಶಾನಕ್ಕೆ ಎಂಗಡಿಸಿಟ್ಟ ಸ್ಥಳದಲ್ಲೂ ಅನ್ಯ ಕೋಮಿನವರು ಆಕ್ರಮಣ ಮಾಡಿದ ಬಗ್ಗೆಯೂ ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸದೆ ಇರಲು ಕಾರಣವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಕೃಷಿ ಜಮೀನಿನಲ್ಲಿ ಭೂ ದಾಖಲೆಯಿರುವ ಸರ್ಕಾರಿ ಜಮೀನಿನಲ್ಲಿ ಸ್ಥಳವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಮೀಸಲಿಟ್ಟ ಬಗ್ಗೆ ಮಂಜೂರಾತಿ ಕಡತ ತಾಲ್ಲೂಕು ಕಛೇರಿಯಿಂದ ಬಂದ ಕೂಡಲೇ ಭೂಮಾಪನ ಕಛೇರಿಯಲ್ಲಿ ಕ್ರಮ ಜರುಗಿಸಿ ಸಂಬಂಧಿಸಿದ ಗ್ರಾಮದ ದಾಖಲೆಗಳಲ್ಲಿ ಸೇರಿಸಲಾಗುವುದು:ಇಂಡೀಕರಣಗೊಳಿಸಲಾಗುವುದು.

ಇಂತಹ ಸ್ಥಳಗಳು ಆಕ್ರಮಣವಾಗಿರುವುದು ಕಾಲಕಾಲಕ್ಕೆ ಸರ್ಕಾರದ ಗಮನಕ್ಕೆ ಬಂದಾಗ ತೆರವುಗೊಳಿಸಲು ಅಗತ್ಯ ಕ್ರಮ ಜರುಗಿಸಲಾಗುವುದು.

ಆ) ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಸರ್ಕಾರಿ ಜಮೀನು ಆಕ್ರಮಣವಾಗಿದ್ದರೆ ನಿಯಮಾನುಸಾರ ಪರಿಶೀಲನೆಗೆ ಒಳಪಡಿಸಿ ಅದನ್ನು ಆಕ್ರಮಣಕಾರರಿಂದ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕ್ರಮ ಜರುಗಿಸಲಾಗುವುದು.

ಇ) ಉರುವಾಲು ಗ್ರಾಮದ ಸರ್ವೆ ನಂ. 19-1ರಲ್ಲಿ ಪಶು ಚಿಕಿತ್ಸಾ ಕೇಂದ್ರಕ್ಕೆ ಯಾವುದೇ ಸ್ಥಳ ಮೀಸಲಿರಿಸಿಲ್ಲ. ಆದರೆ ಸರ್ವೆ ನಂ. 18:1ರಲ್ಲಿ 0.70 ಎಕರೆ ಸ್ಥಳ ಪಶು ಚಿಕಿತ್ಸಾ ಕೇಂದ್ರಕ್ಕೆ ಕಾದಿರಿಸಲಾಗಿದ್ದು, ಈ ಪೈಕಿ ಅಂಶಿಕ ಸ್ಥಳ ಆಕ್ರಮಣವಾಗಿದೆ ಎಂದು ಕ್ರಮ ಪ್ರಾರಂಭಿಸಲಾಗಿದೆ. ಈ ಸ್ಥಳದಲ್ಲಿ ಸರ್ವೆ ವ್ಯತ್ಯಾಸ ಇದ್ದು ಒಂದಕ್ಕೊಂದು ಓವರ್‌ಲ್ಯಾಪ್ ಆಗುವುದರಿಂದ, ದುರಸ್ತಿ ಬಗ್ಗೆ ಸಂಬಂಧಿಸಿದ ಭೂಮಾಪನ ಇಲಾಖೆಯ ಅಧಿಕಾರಿಗಳಿಗೆ ತುರ್ತು ಕ್ರಮ ಜರುಗಿಸಲು ಸೂಚಿಸಲಾಗಿದೆ. ಈ ಬಗ್ಗೆ ಅವರು ಕ್ರಮ ಜರುಗಿಸುತ್ತಿದ್ದು, ಅವರಿಂದ ಅಂತಿಮ ವರದಿ ಬಂದ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಈ) ಹಿಂದೂ ರುದ್ರಭೂಮಿಗಾಗಿ ಉರುವಾಲು ಗ್ರಾಮದ ಸ.ನಂ. 19:1ಎ1ಬಿರಲ್ಲಿ 1-00 ಎಕರೆ ಹಾಗೂ ಮುಸ್ಲಿಂ ದಫನಕ್ಕಾಗಿ ಸ.ನಂ. 106ರ ಪೈಕಿ 0-48 ಎಕರೆ ಮತ್ತು ಸ.ನಂ. 229:3ಎ ಪೈಕಿ 1-00 ಎಕರೆ ಸ್ಥಳವನ್ನು ಕಾದಿರಿಸಲಾಗಿದೆ.

"ಕೇರಳ ಮೂಲದ ರೋಮನ್ ಕೆಥೋಲಿಕ್ ಜಾತಿಯ ಒಬ್ಬ ಗಬ್ಬರು ಟ್ಯಾಪರ" ಒಂದು ಜೋಪಡಿಯನ್ನು ಕಟ್ಟಿಕೊಂಡು ಕುಟುಂಬ ಸಮೇತ ವಾಸ್ತವ್ಯ ಇರುತ್ತಿದ್ದು, ಇವರ ವಾಸ್ತವ್ಯದ ಜೊಪಡಿ ಹಿಂದೂ ರುದ್ರ ಭೂಮಿಗೆ ಲಗ್ತ ಇದೆ. ಸದರಿಯವರು ಈ ಹಿಂದೂ ರುದ್ರ ಭೂಮಿಯನ್ನು ಒತ್ತುವರಿ ಮಾಡಿ ಬೇಲಿ ನಿರ್ಮಿಸಿದ್ದರು. ಸ್ವತಃ ತಹಸೀಲ್ದಾರ್ ರವರು ಮತ್ತು ಕಂದಾಯ ನಿರೀಕ್ಷಕರು ಹಾಗೂ ಗ್ರಾಮಕರಣಿಕರು ಸದರಿ ಅತಿಕ್ರಮಣವನ್ನು ತೆರವುಗೊಳಿಸಿರುತ್ತಾರೆ. ತದನಂತರ ಯಾರೂ ಅತಿಕ್ರಮಣ ನಡೆಸಿರುವುದಿಲ್ಲ. ಆಕ್ಷೇಪಣೆಗಳು ಬಂದ ಮೇರೆಗೆ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ.

ಅಮರಗೋಳದಿಂದ ಸವದತ್ತಿ ರಸ್ತೆಗೆ ಜೋಡಿಸುವ ನಬಾರ್ಡ್ ಕೆಲಸದ ಪ್ರಗತಿ

305 (2378) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ-ಹುಬ್ಬಳ್ಳಿ ನಗರದ ಮಧ್ಯದಲ್ಲಿಯೇ ಶ್ರೀ ಬಸವೇಶ್ವರ ಕೃಷಿ ಹುಟ್ಟುವಳಿ ಮಾರುಕಟ್ಟೆಯ ಅಮರಗೋಳದಿಂದ ಸವದತ್ತಿ ರಸ್ತೆಗೆ ಜೋಡಿಸುವ ನಬಾರ್ಡ್‌ನ ಕೆಲಸ ಯಾವ ಹಂತದಲ್ಲಿದೆ;

ಆ) ಸದರಿ ರಸ್ತೆ ನಬಾರ್ಡಿನಿಂದ ಪೂರ್ತಿಗೊಳಿಸುವ ಕಾರ್ಯದಲ್ಲಿ ಹಣ ಎಷ್ಟು ಬಿಡುಗಡೆಯಾಗಿದೆ; ಉಳಿದಿರುವ ಕೆಲಸ ಪ್ರಾರಂಭಿಸಲು ಹಣ ಬಿಡುಗಡೆ ಯಾವಾಗ ಮಾಡಲಾಗುವುದು;

ಇ) ಈ ನಬಾರ್ಡ್ ರಸ್ತೆಯಿಂದ ನಗರದ ಹೊರವಲಯದ ಮಾಗಶವಾಗಿರುವುದರಿಂದ ಬಹು ದೊಡ್ಡ ಪ್ರಮಾಣದಲ್ಲಿ ವಾಹನಗಳ ದಟ್ಟಣೆ ನಗರದಲ್ಲಿ ಕಡಿಮೆಯಾಗುವುದು ನಿಜವೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿ-4ರಲ್ಲಿನ ಅಮರಗೊಳದಿಂದ ಬಿಜಾಪುರ ಧಾರವಾಡ ರಾಜ್ಯ ಹೆದ್ದಾರಿಯ-65ನ್ನು ಅಮ್ಮಿನಭಾವಿ ಹತ್ತಿರ ಸಂಪರ್ಕಿಸುವ ರಸ್ತೆ ಅಭಿವೃದ್ಧಿಯ ಮೊದಲ ಹಂತದ ಕಾಮಗಾರಿಯು ಕಿಮೀ 2.25 ರಿಂದ 9.00 ವರೆಗೆ ಜಲ್ಲಿ ಕೆಲಸ ಪೂರ್ಣಗೊಂಡಿದ್ದು, ಡಾಂಬರೀಕರಣ ಪ್ರಗತಿಯಲ್ಲಿದೆ.

ಆ) ಈವರೆಗೆ ಈ ಕಾಮಗಾರಿಗೆ 49.00 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಈ ರಸ್ತೆಯ ಉಳಿದ ಭಾಗದ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿರುವುದಿಲ್ಲ.

ಇ) ಈ ರಸ್ತೆಯ ಪೂರ್ಣ ಉದ್ದದ ಅಭಿವೃದ್ಧಿಯಾದಲ್ಲಿ ರಾಷ್ಟ್ರೀಯ ಹೆದ್ದಾರಿ-4 ರಿಂದ ಬಿಜಾಪುರ ಧಾರವಾಡ ರಾಜ್ಯ ಹೆದ್ದಾರಿ-65ಕ್ಕೆ ಹೋಗುವ ವಾಹನ ದಟ್ಟಣೆ ಕಡಿಮೆಯಾಗುತ್ತದೆ.